# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 516 |
| ಸದಸ್ಯರ ಹೆಸರು | : | ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 19.02.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದ ಕೆಲ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ ಶೌಚಾಲಯ ಸ್ವಚ್ಛ ಮಾಡಿಸುತ್ತಿರುವ ಪ್ರಕರಣಗಳು ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
<ul>
<li>ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲ್ಲೂಕು ಹಂತದ ಅಧಿಕಾರಿಗಳಿಗೆ ಶಾಲೆಗಳ ಮುಖ್ಯ ಶಿಕ್ಷಕರಿಗೆ ಮಕ್ಕಳಿಂದ ಶೌಚಾಲಯ ನಿರ್ವಹಣೆ ಕಾರ್ಯವನ್ನು ಕೈಗೊಳ್ಳದಂತೆ ಅಗತ್ಯ ನಿರ್ದೇಶನ ನೀಡಲಾಗಿರುತ್ತದೆ.</li>
<li>ಒಂದು ವೇಳೆ ಮಕ್ಕಳಿಂದ ಶೌಚಾಲಯ ನಿರ್ವಹಣೆ ಕಾರ್ಯ ನಿರ್ವಹಿಸಿದ್ದಲ್ಲಿ ಅಂತಹವರ ಮೇಲೆ ಇಲಾಖಾ ನಿಯಮಾನುಸಾರ ಶಿಸ್ತು ಕ್ರಮವನ್ನು ಜರುಗಿಸಲಾಗಿಸುವುದರೊಂದಿಗೆ ಎಫ್.ಐ.ಆರ್ ದಾಖಲಿಸಲಾಗುವುದಾಗಿ ಕಟ್ಟು ನಿಟ್ಟಿನ ಸೂಚನೆಯನ್ನು ನೀಡಲಾಗಿರುತ್ತದೆ.</li>
</ul>
</td></tr>
<tr><td>ಆ)</td><td>ಬಂದಿದ್ದಲ್ಲಿ, ರಾಜ್ಯದಲ್ಲಿನ ಸರ್ಕಾರಿ ಶಾಲೆಗಳ ಶೌಚಾಲಯ ಸ್ವಚ್ಛತೆ ಮತ್ತು ನಿರ್ವಹಣೆಗೆ ಸರ್ಕಾರ ಅನುಸರಿಸುತ್ತಿರುವ ಕ್ರಮಗಳೇನು ಹಾಗೂ ಪ್ರತಿ ತಿಂಗಳು ಸದರಿ ಉದ್ದೇಶಕ್ಕಾಗಿ ಪ್ರತಿ ಶಾಲೆಗೆ ನೀಡುತ್ತಿರುವ ಅನುದಾನದ ವಿವರಗಳೇನು;</td><td>
ರಾಜ್ಯದಲ್ಲಿನ ಸರ್ಕಾರಿ ಶಾಲೆಗಳ ಶೌಚಾಲಯ ಸ್ವಚ್ಛತೆ ಮತ್ತು ನಿರ್ವಹಣೆಗೆ ಅನುಸರಿಸುತ್ತಿರುವ ಕಳೆದ 3 ವರ್ಷಗಳಲ್ಲಿ ಪ್ರತಿ ಶಾಲೆಗೆ ನೀಡುತ್ತಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.
2021-22
<table>
<tr><th>ಶಾಲೆಗಳ ವಿವರ</th><th>ಘಟಕ ವೆಚ್ಚ (ರೂ.ಗಳಲ್ಲಿ)</th><th>ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ)</th></tr>
<tr><td>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು</td><td>4650/-</td><td>967.00</td></tr>
<tr><td>ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು</td><td>5400/-</td><td>1214.00</td></tr>
<tr><td>ಸರ್ಕಾರಿ ಪ್ರೌಢ ಶಾಲೆಗಳು</td><td>6750/-</td><td>319.00</td></tr>
<tr><td>ಒಟ್ಟು</td><td>---</td><td>2500.00</td></tr>
</table>
2022-23
<table>
<tr><th>ಶಾಲೆಗಳ ವಿವರ</th><th>ಘಟಕ ವೆಚ್ಚ (ರೂ.ಗಳಲ್ಲಿ)</th><th>ಅನುದಾನ ಬಿಡುಗಡೆ (ರೂ.ಲಕ್ಷಗಳಲ್ಲಿ)</th></tr>
<tr><td>ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು</td><td>6350/-</td><td>1317.43</td></tr>
<tr><td>ಸರ್ಕಾರಿ ಹಿರಿಯ ಪ್ರಾಥಮಿಕ</td><td>8000/-</td><td>1752.48</td></tr>
</table>
</td></tr>
</table>

| | | |
|---|---|---|
| ಸರ್ಕಾರಿ ಪ್ರೌಢ ಶಾಲೆಗಳು | 9000/- | 425.61 |
| **ಒಟ್ಟು** | --- | **3500.00** |

**2023-24**

| ಕ್ರಸಂ | ಮಕ್ಕಳ ಸಂಖ್ಯೆ | ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಸಂಖ್ಯೆ | ಘಟಕ ವೆಚ್ಚ (ರೂ.ಗಳಲ್ಲಿ) | ನಿಗದಿ ಮಾಡಲಾದ ಒಟ್ಟು ಮೊತ್ತ (ರೂ.ಕೋಟಿಗಳಲ್ಲಿ) |
|---|---|---|---|---|
| 1 | 1-50 | 23,342 | ರೂ.20,000/- | 46.68 |
| 2 | 51-100 | 9,229 | ರೂ.28,000/- | 25.84 |
| 3 | 101-500 | 13,624 | ರೂ.33,000/- | 44.96 |
| 4 | 501 + | 634 | ರೂ.45,000/- | 2.85 |
| | | ಒಟ್ಟು | | **120.33** |

| | | |
|---|---|---|
| ಇ) | ಶೌಚಾಲಯ ಅತ್ಯಂತ ಕನಿಷ್ಠ ಮೂಲ ಸೌಕರ್ಯವಾಗಿದ್ದು, ಅದರ ನಿರ್ವಹಣೆ ಮತ್ತು ಸ್ವಚ್ಛತೆಗೆ ಕೂಡಲೇ ಸಮರ್ಪಕ ವ್ಯವಸ್ಥೆ ಕಲ್ಪಿಸಲು ಸರ್ಕಾರ ಕ್ರಮ ವಹಿಸಿದೆಯೇ; | ಹೌದು |
| ಈ) | ಸದರಿ ಪ್ರಕರಣಗಳು ಮರುಕಳಿಸದಂತೆ ತಡೆಯಲು ಹಾಗೂ ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿಗಳ ನೋಂದಣಿ ಹೆಚ್ಚಿಸುವ ನಿಟ್ಟಿನಲ್ಲಿ ಸರ್ಕಾರಿ ಶಾಲೆಗಳ ಶೌಚಾಲಯಗಳ ಸ್ವಚ್ಛತೆ ಹಾಗೂ ನಿರ್ವಹಣೆಗೆ ಪ್ರತ್ಯೇಕ ಅನುದಾನ ನಿಗದಿಪಡಿಸಲು ಸರ್ಕಾರ ಈ ಕೂಡಲೇ ಕ್ರಮ ವಹಿಸುವುದೇ? | ಶಾಲಾ ನಿರ್ವಹಣೆಗಾಗಿ ಈಗಾಗಲೇ ಪ್ರತ್ಯೇಕ ಅನುದಾನ ನೀಡಲಾಗುತ್ತಿದ್ದು, ಸದರಿ ಅನುದಾನವನ್ನು ಶಾಲಾ ಸ್ವಚ್ಛತೆ, ಸಾದಿಲ್ವಾರು ವೆಚ್ಚ, ಕುಡಿಯುವ ನೀರು, ಶೌಚಾಲಯ ನಿರ್ವಹಣೆಗಾಗಿ ಸ್ವಚ್ಛತಾ ವಸ್ತುಗಳ ಖರೀದಿ ಇತ್ಯಾದಿಗಾಗಿ ಬಳಸಲಾಗುತ್ತದೆ. ಶಾಲಾ ಸ್ವಚ್ಛತೆಯಲ್ಲಿ ಅತ್ಯಂತ ಪ್ರಮುಖವಾದ ಭಾಗ ಶೌಚಾಲಯ ಸ್ವಚ್ಛತೆ ಹಾಗೂ ನಿರ್ವಹಣೆಯಾಗಿದ್ದು, ಹೆಚ್ಚಿನ ಅನುದಾನ ಕೋರಿ ಆರ್ಥಿಕ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಆಯವ್ಯಯದಲ್ಲಿ ಒದಗಿಸಲಾದ ಅನುದಾನದ ಲಭ್ಯತೆ ಆಧರಿಸಿ ಶಾಲೆಗಳ ನಿರ್ವಹಣೆ ವೆಚ್ಚವನ್ನು ಹೆಚ್ಚಿಸಲು ಅಗತ್ಯ ಕ್ರಮವಹಿಸಲಾಗುತ್ತಿದೆ. |

**ಇಪಿ: 74 ಯೋಸಕ 2024**

(ಎಸ್.ಮಧು ಬಂಗಾರಪ್ಪ)

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು**